ಅಲ್ಲಿಂದ ಪಡೆದುಕೊಂಡು ಯಾರ್ಯಾರ ಮೇಲೆ ಮೊಕದ್ದಮೆಗಳನ್ನು ಹಾಕಲಾಗಿದೆ ಎಂಬುದನ್ನು ನೋಡಿ, ಕಾನೂನು ಕ್ರಮಗಳ ಮೇರೆಗೆ ತಾವುಗಳು ಹೇಳಿದ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ಸರಕಾರದವರು ಹಾಕಿದ ಮೊಕದ್ದಮೆಗಳನ್ನು ಈ ಕೂಡಲೇ ವಾಪಸ್ ತೆಗೆದುಕೊಳ್ಳಬೇಕು. ಈಗ ಸರಕಾರದವರು ಕೈಗೊಂಡಿರತಕ್ಕಂಥ ಕ್ರಮಗಳು ಅಕ್ರಮವಾಗಿವೆ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸಚಿವರು ಆ ಕುರಿತು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಈಗಾಗಲೇ ಹೇಳಿದ್ದಾರೆ, ಪುನಃ ತಾವುಗಳು ಏಕೆ ಮಾತನಾಡುತ್ತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್: ಸರಕಾರವು ಕನ್ನಡಿಗರ ಮೇಲೆ ಬೆಳಗಾವಿಯಲ್ಲಿ ದೌರ್ಜನ್ಯವನ್ನು ಮಾಡಿದೆ. ಕನ್ನಡಿಗರ ಮೇಲೆ ಅಂದು ಹಾಕಿದ ಮೊಕದ್ದಮೆಗಳನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಲೇಬೇಕು... ಸರಕಾರದ ಈ ಕನ್ನಡಿಗರ ಬಂಧನದ ಕ್ರಮವನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ: ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಸರಕಾರದವರು ಕೊಡಬೇಕು..

ಉಪಾಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಈ ವಿಷಯವು ಇಲ್ಲಿಗೆ ಮುಕ್ತಾಯವಾಗಿದೆ. ಈಗ ಗುರುನಾಥ್‌ರವರು ತಮ್ಮ ವಿಚಾರವನ್ನು ಪ್ರಸ್ತಾಪ ಮಾಡಿ.

**(ಆ) ಶಹಬಾದ್‌ನ ಎಚ್‌ಎಂಪಿ ಸಿಮೆಂಟ್ ಕಾರ್ಖಾನೆ ಬಗ್ಗೆ.**

+ ಶ್ರೀ ಸಿ.ಗುರುನಾಥ್ (ಶಹಬಾದ್): ಮಾನ್ಯ ಅಧ್ಯಕ್ಷರೇ, ನಾನು ಮೊನ್ನೆ ಎಚ್‌ಎಂಪಿ ಸಿಮೆಂಟ್ ಕಾರ್ಖಾನೆಯ ಬಗ್ಗೆ ಸದನದ ಗಮನಕ್ಕೆ ವಿಚಾರವನ್ನು ತರಲು ಪ್ರಯತ್ನ ಮಾಡಿದ್ದೆ. ಸುಮಾರು 85 ವರ್ಷಗಳಿಗಿಂತ ಮುಂಚೆಯೇ ಕರ್ನಾಟಕ ರಾಜ್ಯದ ಗುಲಬರ್ಗ ಜಿಲ್ಲೆಯ ಶಹಬಾದ್‌ನಲ್ಲಿ ಆಗಿತ್ತು. ಆ ಕಾರ್ಖಾನೆಯಲ್ಲಿ ಸುಮಾರು 10 ಸಾವಿರ ಜನರು ಕೆಲಸ ಮಾಡುತ್ತಾ ಇದ್ದರು. ಈ ವೆಟ್‌ಪ್ರಾಸೆಸ್ ಸಿಮೆಂಟ್ ಟೆಕ್ನಾಲಜಿಗೆ ಅನುಗುಣವಾಗಿ ಏಳುವರ್ಷಗಳಿಗಿಂತ ಮುಂಚೆ ಟಾಟನವರ ಹತ್ತಿರ ಇತ್ತು. ತದನಂತರ ಎಸಿಸಿ ಸಿಮೆಂಟ್‌ನವರದ್ದಾಯಿತು, ಎಸಿಸಿಯವರು ಎಚ್‌ಎಂಟಿ ಕಲ್ಕತ್ತಾ ಗ್ರೂಪ್‌ನವರಿಗೆ ಸಂಬಂಧಪಟ್ಟಂಥ ಹೇಮರಾಜ್ ಮಹಾವೀರ್ ಪೋತದಾರ್ ಎನ್ನುವರಿಗೆ ಮಾರಾಟ

ಮಾಡಿದರು. ಈ ದೇಶದಲ್ಲಿ ನಾಲ್ಕು ಸಿಮೆಂಟ್ ಕಾರ್ಖಾನೆಗಳನ್ನು ಕೇವಲ 14ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿದರು. ಶಹಬಾದ್‌ನಲ್ಲಿರತಕ್ಕಂಥ ಸಿಮೆಂಟ್ ಕಾರ್ಖಾನೆಯು ಇವ್ವೊತ್ತು ಅಲ್ಲಿನ ರೆವಿನ್ಯೂ ಸಬ್‌ರಿಜಿಸ್ಟ್ರಾರ್‌ರವರ ಆಫೀಸ್‌ನಲ್ಲಿ ಕೇವಲ ಒಂದೂವರೆ ಕೋಟಿ ರೂಪಾಯಿಗಳಿಗೆ ರಿಜಿಸ್ಟ್ರೇಷನ್ ಮಾಡಿಕೊಂಡಿದ್ದಾರೆ. ಅವರ ಕಡೆ ಅಗ್ರಿಮೆಂಟಾದ ವ್ಯಾಲ್ಯೂ ಮತ್ತು ಖರೀದಿ ಮಾಡಿದ್ದಕ್ಕೂ ವ್ಯತ್ಯಾಸ ಇದೆ. ಈ ಕಾರ್ಖಾನೆ ರಿಜಿಸ್ಟ್ರೇಷನ್ ಆಗುವ ಸಂದರ್ಭದಲ್ಲಿ ನಮ್ಮ ರೆವಿನ್ಯೂ ಇಲಾಖೆಯವರು ಅದರಲ್ಲಿ ಭಾಗಿಯಾಗಿದ್ದಾರೆ. ಇದನ್ನು ರಿಜಿಸ್ಟರ್ ಮಾಡಿದ ಅಧಿಕಾರಿ ವಿರುದ್ಧ ಮೊದಲನೆಯದಾಗಿ ಕ್ರಮ ಕೈಗೊಳ್ಳಬೇಕು. ಆಮೇಲೆ ತಪ್ಪುಲೆಕ್ಕ ಒಪ್ಪಿಸಿ ಇಲ್ಲೀಗಲ್ಲಾಗಿ ಏನು ರಿಜಿಸ್ಟರ್ ಮಾಡಿದ್ದಾರೆ ಆ ಮಾಲೀಕನಿಂದ ವಸೂಲು ಮಾಡಬೇಕು. ಈ ಕಾರ್ಖಾನೆ ಮಾರುವಾಗ ಎಸಿಸಿಯವರು ಕಾರ್ಮಿಕರ ಜೊತೆ ಒಂದು ಒಪ್ಪಂದ ಮಾಡಿಕೊಂಡಿದ್ದರು. ದೇಶದ ಇತರ ಸಿಮೆಂಟ್ ಕಾರ್ಖಾನೆ ಕಾರ್ಮಿಕರಿಗೆ ಕೊಡುತ್ತಿರುವ ವೇಜ್‌ಬೋರ್ಡ್‌ಅನ್ನು ಇವರಿಗೂ ಅನ್ವಯಿಸಬೇಕೆಂಬುದು ಆ ಒಪ್ಪಂದ. ಆದರೆ ಹೇಮರಾಜ್ ಮಹಾವೀರ್ ಪೊದ್ದಾರ್‌ರವರು ಏಳು ವರ್ಷದ ಮುಂಚೆ ಕೆಲಸಗಾರರಿಗೆ ಕಿರುಕುಳ ಕೊಡುತ್ತಾ ಸರ್ಕಾರವನ್ನೂ ಮುಳುಗಿಸುತ್ತಾ ಬಂದಿದ್ದಾರೆ. ಸರ್ಕಾರಕ್ಕೆ ಇವತ್ತು ಅವರಿಂದ ಬಾಕಿ ಬಹಳ ಇದೆ. ಇದರಲ್ಲಿ ಸರ್ಕಾರಿ ಇಲಾಖೆಗಳೂ ಶಾಮೀಲಾಗಿವೆ ಎಂದು ಹೇಳಲು ಇಚ್ಛೆಪಡುತ್ತೇನೆ. ನಾನು ಹಲವಾರು ಸಲ ನಮ್ಮ ಮುಖ್ಯಮಂತ್ರಿಗಳನ್ನು ಕಂಡೆ. ಆದರೂ ಯಾವುದೂ ಪರಿಹಾರವಾಗಲಿಲ್ಲ. ಅಂಥವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬಹಳ ಮುಖ್ಯ ವಿಷಯವನ್ನು ಗುರುನಾಥ ಎತ್ತಿದ್ದಾರೆ. ಆ ಎಸಿಸಿ ಸಿಮೆಂಟ್ ಕಾರ್ಖಾನೆ ಮುಚ್ಚಿ ಬಹಳ ದಿವಸವಾಯಿತು. ಅಲ್ಲಿ ಸಾವಿರಾರು ಕಾರ್ಮಿಕರು ಸಾಯುತ್ತಿದ್ದಾರೆ. ಇಂಡಸ್ಟ್ರೀಸ್ ಮಿನಿಸ್ಟರ್ ಎಲ್ಲಿ? ಅವರಿಗೆ ನೋಟಿಸ್ ಕೊಟ್ಟು ಎತ್ತಬೇಕಾಗಿದ್ದ ವಿಷಯ. ಆದರೂ ಇವತ್ತು ಜೀರೋ ಅವರ್‌ನಲ್ಲಿ ಎಲ್ಲರೂ ಪ್ರಮುಖ ವಿಷಯಗಳನ್ನು ಎತ್ತುತ್ತಾರೆ ಎಂಬುದು ಗೊತ್ತಿದ್ದೂ ಅವರು ಹಾಜರಿಲ್ಲ ಅಂದರೆ ಯಾರಿಗೆ ಹೇಳುವುದು? ಇದಕ್ಕೆ ಉತ್ತರ ಕೊಡುವುದಕ್ಕೆ ಅವರು ಹಾಜರಿರದೆ ಎಲ್ಲಿಗೆ ಹೋಗಿದ್ದಾರೆ?

ಶ್ರೀ ಸಿದ್ದರಾಮಯ್ಯ: ಕಾರ್ಮಿಕ ಮಂತ್ರಿಗಳು ಉತ್ತರ ಕೊಡುತ್ತಾರೆ, ಅವರು ಸಿದ್ಧರಿದ್ದಾರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ರಾಜೀನಾಮೆ ಕೊಟ್ಟು ಸದನಕ್ಕೆ ಬರೋಲ್ಲ ಎಂದು ಗೊಳೋ ಎಂದು ಅತ್ತು ಸುಸ್ತಾಗಿ ಕೂತಿದ್ದಾರೆ. ಅವರೆಲ್ಲಿ ಉತ್ತರ ಕೊಟ್ಟಾರು?

ಶ್ರೀ ಸಿದ್ದರಾಮಯ್ಯ: ಸರ್ಕಾರದ ಪರವಾಗಿ ಅವರು ಉತ್ತರಿಸುತ್ತಾರೆ. ನೀವು ಆಮೇಲೆ ಕೇಳಿ.

ಶ್ರೀ ಸಿ.ಗುರುನಾಥ್: ಆಳುವಂತಹ ಪಕ್ಷ ನಮ್ಮನ್ನು ಆಳುಗಳೆಂದು ತಿಳಿದಿದ್ದರೆ ಸ್ವಲ್ಪ ವ್ಯಥೆಯಾಗುತ್ತದೆ. ಈ ಕಾರ್ಖಾನೆಯಿಂದ ಅಂದಾಜು 7 ಕೋಟಿ ಸರ್ಕಾರಕ್ಕೆ ಬರುತ್ತದೆ. ಸರ್ಕಾರಿ ಕೆಂಪು ಲೈಟ್ ವಾಹನದಲ್ಲಿ ತಿರುಗಾಡುವ ಸಚಿವರು ಯಾರಿದ್ದಾರೆ ಅವರಿಗೂ ಜವಾಬ್ದಾರಿ ಇದೆ. ಸರ್ಕಾರಕ್ಕೆ ಯಾಕೆ ರೆವಿನ್ಯೂ ಕಡಿಮೆಯಾಗಿದೆ ಎಂಬುದನ್ನು ನೋಡಿಕೊಳ್ಳುವುದು ಅವರ ಅತಿ ಜರೂರು ಜವಾಬ್ದಾರಿ. ಇವರು ಇಷ್ಟು ದಿವಸ ಏನು ಮಾಡಿದರು? ಸರ್ಕಾರಕ್ಕೆ ತಿಂಗಳಿಗೆ 7 ಕೋಟಿ ರೂ ಕಾರ್ಖಾನೆಯಿಂದ ಬರಬೇಕಾಗಿದ್ದುದು ನಿಂತುಹೋಯಿತು. ಹಲವಾರು ಇಲಾಖೆಗಳ ವ್ಯಾಪ್ತಿಗೆ ಈ ಮೊಬಲಗು ಸಲ್ಲುತ್ತದೆ. ಕೆಲಸಗಾರರಿಗೆ ಕೊಡಬೇಕಾದ ಗ್ರಾಚ್ಯುಯಿಟಿ ಇರಬಹುದು ಪಿಎಫ್ ಇರಬಹುದು ಏಮೆ ಇರಬಹುದು ಇದರ ಬಾಬ್ತು 4.5 ಕೋಟಿ ರೂ ಕೊಡಬೇಕು. ಮಾರಾಟ ತೆರಿಗೆ 1.5 ಕೋಟಿ ರೂ ಕೊಡಬೇಕು. ಮೈನಿಂಗ್‌ರಾಯಲ್ಟಿ 8 ಕೋಟಿ ರೂ.ಕೊಡಬೇಕು. ಕೆಇಬಿಗೆ 5 ಕೋಟಿ ರೂ. ಕೊಡಬೇಕು. ಬೇರೆ ಪಾರ್ಟಿಗಳಿಗೆ ಕೊಡಬೇಕಾಗಿದ್ದು 7.5 ಕೋಟಿ ರೂಗಳು. ರೈಲ್ವೆಯವರಿಗೆ 90 ಲಕ್ಷ ರೂ. ಕೊಡಬೇಕು. ಕೆಎಸ್‌ಐಡಿಸಿಯವರಿಗೆ 9.70 ಕೋಟಿ ರೂ.ಕೊಡಬೇಕು. ಇದನೆಲ್ಲಾ ಇಲಾಖೆಗಳವರು ಮಾಲೀಕರನ್ನು ಏತಕ್ಕೆ ಕೇಳುತ್ತಿಲ್ಲ ಎಂಬುದು ನನ್ನ ಪ್ರಶ್ನೆ. ಇವರು 7 ವರ್ಷದಿಂದ ಸರ್ಕಾರಕ್ಕೆ ವಂಚಿಸುತ್ತಿದ್ದಾನೆ. ಸರ್ಕಾರ ಮಲಿಗಿದೆಯೇ? ನನ್ನದು ಜವಾಬ್ದಾರಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಕೈಗಾರಿಕೆ ಸಚಿವರ, ಸಂಬಂಧ ಇಲಾಖೆ ಕಡೆಗೆ, ಮೈನಿಂಗ್ ಸಚಿವರ ಕಡೆಗೆ, ಕೆಇಬಿ ಚೇರ್ಮನರ ಹತ್ತಿರ - ಎಲ್ಲಾ ಕಡೆ ಹೋಗಿ ಇವರಿಂದ ಸರ್ಕಾರಕ್ಕಾಗುವ ಲುಕ್ಸಾನು ವಂಚನೆಯನ್ನು ಹೇಳಿದ್ದೇನೆ. ಆದರೂ ಇನ್ನೂವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನಾನು ಹಲವಾರು ಸಲ ಮುಖ್ಯಮಂತ್ರಿಗಳನ್ನೂ ಭೆಟ್ಟಿಯಾಗಿದ್ದೆ. ಒಂದೊಂದು ಸಲ ಒಂದು ಉತ್ತರ ಹೇಳುತ್ತಿದ್ದಾರೆ. ಒಂದು ಸಲ ಈ ಕಾರ್ಖಾನೆ ಖಾಸಗೀದು ಇದೆ ಅಂದರು. ಮೊನ್ನೆ ಆ ಕಾರ್ಖಾನೆಯ ಸಾಮಗ್ರಿಯನ್ನು ಹರಾಜು ಮಾಡಿ ಕೆಲಸಗಾರರಿಗೆ ಬರುವ ಎರಡು ಕೋಟಿ ರೂ. ಕೊಡಬೇಕೆಂಬ ಸರ್ಕಾರಿ ಸೂಚನೆ ಇಲ್ಲಿನ ಲೇಬರ್ ಕಮಿಷನರ್ ಮೂಲಕ ಜಿಲ್ಲಾಧಿಕಾರಿಗೆ ಆದೇಶ ಕೊಡಲಾಗಿತ್ತು, ಅವರ ಮೂಲಕ ತಹಸೀಲ್ದಾರ್ ಎರಡು ಸಲ ಹರಾಜು ಮಾಡಬೇಕಾಗಿತ್ತು. ಒಂದು ಸಲ ಉದ್ದೇಶಪೂರ್ವಕ ವಾರ್ತಾ ಇಲಾಖೆವತಿಯಿಂದ ಅದನ್ನು ತಪ್ಪಿಸಿದರು ಕಾರಣವೇನೆಂದರೆ ಇದರಲ್ಲಿ ಅವರೂ ಶಾಮೀಲಿದ್ದಾರೆ. ಈಗ ಮತ್ತೊಂದು ಸಲ ಕ್ಯಾನ್ಸಲ್ ಮಾಡಿದ್ದಾರೆ. ಮೊನ್ನೆ ಅಕ್ಷನ್ ಇತ್ತು. ಅವರ ಬಾಯಲ್ಲಿ ಮಣ್ಣು ಹಾಕಿ ಇವರು ಸಿದ್ಧಾಂತ ಹೇಳುತ್ತಿದ್ದಾರೆ. ಸಮಾಜವಾದ ಏನೇನೋ ಹೇಳುತ್ತಾರೆ. ಪ್ರಶ್ನೆ ಇಷ್ಟೇ ಇದೆ: ಇದು ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿದೆಯೋ ಕ್ಯಾನ್ಸಲ್ ಮಾಡುವುದಕ್ಕೆ? ಇದು ಕೈಗಾರಿಕೆ ಸಚಿವರಿಗೆ ಸಂಬಂಧ ಇದೆಯೇನು? ಇವತ್ತು ನಮಗೆ ಲೇಬರ್ ಕಮಿಶನರ್ ಹೇಳುತ್ತಾರೆ ಅಲ್ಲಿರುವಂತಹ ಅಜಿತ್‌ಪಾಂಜಾರವರ ದೆಸೆಯಿಂದ ಇದು ಮಾಡಬೇಕಾಯಿತು ಎಂದು. ಹೊಸ ಕಾನೂನೇನಾದರೂ ಮಾಡಿದ್ದೀರಾ? ಇದು ಕ್ಯಾಬಿನೆಟ್‌ನಲ್ಲಿ ಡಿಸಿಷನ್ ಆಗಿದೆ.

ನೀವು ಹೇಳಬೇಕು.

ಉಪಾಧ್ಯಕ್ಷರು: ಮಾನ್ಯ ಗುರುನಾಥ್‌ರವರೇ, ದಯಮಾಡಿ ಕೇಳಿ. ಇದು ಶೂನ್ಯವೇಳೆ. ತಾವು ಬೇಕಾದರೆ ಅರ್ಧ ಗಂಟೆ ಚರ್ಚೆಗೆ ಹಾಕಬೇಕಾಗಿತ್ತು. ಎಷ್ಟು ಹೊತ್ತು ಅವಕಾಶವನ್ನು ಕೊಡುವುದು ಹೇಳಿ.

ಶ್ರೀ ಸಿ.ಗುರುನಾಥ್: ಇದಕ್ಕೆ ಯಾರು ಉತ್ತರ ಕೊಡಬೇಕು ಹೇಳಿ.

ಉಪಾಧ್ಯಕ್ಷರು: ಇಲ್ಲಿ ಉಪಮುಖ್ಯಮಂತ್ರಿಗಳಿದ್ದಾರೆ. ಲೇಬರ್ ಮಿನಿಸ್ಟರ್ ಇದ್ದಾರೆ. ಸರ್ಕಾರದ ಪರವಾಗಿ ಉಪಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿ.ಗುರುನಾಥ್: ನನ್ನ ಪ್ರಶ್ನೆ ಇಷ್ಟೆ. ಇವರು ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿದರೇನು? ಇವರು ಯಾವ ಕಾನೂನನ್ನು ಮಾಡಿದರು. ಹೊಸದಾಗಿ ಮಾಡಿದ್ದೀರಾ? ನಾಲ್ಕು ದಿವಸ ಮೊದಲು ಮಾಡಿದಿರಾ? ರೆವಿನ್ಯೂನಲ್ಲಿ ಯಾವುದಾದರೂ ಕಾನೂನು ಇದೆಯೇ? ಇವತ್ತು ಅವರು ಒಂದು ನೆಪ ಏನು ಹೇಳುತ್ತಾರೆ, ಹೈಪವರ್ ಕಮಿಟಿ ಆಯಿತು ಎಂದು. ಹೈಪವರ್ ಕಮಿಟಿಯನ್ನು ಮಾಡಲಿಕ್ಕೆ ಯಾರು ಆದೇಶವನ್ನು ಮಾಡಿದರು? ಇಲ್ಲಿರುವ ಲೇಬರ್ ಕಮಿಷನರ್ ಆದೇಶವನ್ನು ಮಾಡಿದರೇ? ಹೈಪವರ್ ಕಮಿಟಿ ಮಾಡಲಿಕ್ಕೆ....

ಉಪಾಧ್ಯಕ್ಷರು: ನೀವೊಬ್ಬರೇ ಮಾತನಾಡುವುದಕ್ಕೆ ಆಗುವುದಿಲ್ಲ. ನೀವು ಕೇಳಿದ್ದಕ್ಕೆ ಅವರು ಉತ್ತರ ಹೇಳಬೇಕಲ್ಲವೇ. ದಯಮಾಡಿ ತಾವು ಕೂಡ್ರಿ.

ಶ್ರೀ ಸಿ.ಗುರುನಾಥ್: ಹೈಪವರ ಕಮಿಟಿಯಲ್ಲಿರುವವರು ಇವತ್ತಿನ ದಿವಸ....

ಉಪಾಧ್ಯಕ್ಷರು: ನೀವು ಇಷ್ಟು ದೀರ್ಘವಾಗಿ ಮಾತನಾಡುವ ಅವಶ್ಯಕತೆ ಇಲ್ಲ. ನಿಮ್ಮ ನೋಟೀಸನ್ನು ಅವರಿಗೆ ಕೊಟ್ಟಿದ್ದೇವೆ. ಅವರು ಉತ್ತರ ಹೇಳುತ್ತಾರೆ. ತಾವು ದಯಮಾಡಿ ಕೂಡಿ.

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ಸಚಿವರು): ಮಾನ್ಯ ಅಧ್ಯಕ್ಷರೇ, ಈಗಾಗಲೇ ಗುರುನಾಥ್‌ರವರು ಹೇಳಿದ ಹಾಗೆ ಶಹಬಾದ್‌ನ ಹೆಚ್.ಎಂ.ಪಿ. ಕಾರ್ಖಾನೆ ಸಿಮೆಂಟನ್ನು ಉತ್ಪಾದನೆ ಮಾಡುವ ಕಾರ್ಖಾನೆ ಸುಮಾರು 11 ತಿಂಗಳ ಹಿಂದೆ ಉತ್ಪಾದನೆ ಸ್ಥಗಿತಕೊಂಡ ಸಂದರ್ಭದಲ್ಲಿ ಅವರು ಕೊಟ್ಟ ಕಾರಣಗಳನ್ನು ಕಾರ್ಮಿಕ ಇಲಾಖೆ ಒಪ್ಪದೆ ಅದು ಅಕ್ರಮವಾಗಿ ಕಾರ್ಖಾನೆಯನ್ನು ಮುಚ್ಚಿದಂಥ, ಕಾನೂನಿಗೆ ವಿರುದ್ಧವಾಗಿ ಮುಚ್ಚಿದಂಥ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಇಲ್ಲೀಗಲ್ ಲಾಕ್ ಔಟ್ ಎಂದು ಘೋಷಣೆ ಮಾಡಿ ಅವರ ಜೊತೆ ಸಂಧಾನಕ್ಕಾಗಿ ನನ್ನ ಇಲಾಖೆಯ ಅಧಿಕಾರಿಗಳ ಮಟ್ಟದಲ್ಲಿ ಅನೇಕ ಸಭೆಗಳು ನಡೆದವು. ನಾನೂ ಸಹ ಮೂರು

ಸಭೆಗಳಲ್ಲಿ ಹಾಜರಾಗಿ ಬಂದಿದ್ದೇನೆ. ಇದರಲ್ಲಿ ಸನ್ಮಾನ್ಯ ಗುರುನಾಥ್‌ರವರು ಸಹಾ ಭಾಗವಹಿಸಿದ್ದರು. ನನ್ನ ಕಛೇರಿಯಲ್ಲಿ ಕರೆದು ಆ ವ್ಯಾಜ್ಯವನ್ನು ಇತ್ಯರ್ಥ ಮಾಡಲಿಕ್ಕೆ ಎಲ್ಲಾ ಪ್ರಯತ್ನವನ್ನು ಸರ್ಕಾರ ಪ್ರಾಮಾಣಿಕವಾಗಿ ಮಾಡಿದೆ. ಆ ದಿಸೆಯಲ್ಲಿಯೂ ಆ ವ್ಯಾಜ್ಯ ಬಗೆಹರಿಯದಿದ್ದ ಸಂದರ್ಭದಲ್ಲಿ ಕಾರ್ಮಿಕ ಇಲಾಖೆ ನಮ್ಮ ಕಾನೂನುಗಳ ಪ್ರಕಾರ ನಮ್ಮ ಕಾರ್ಮಿಕರಿಗೆ ಬರುವ ಎಲ್ಲಾ ವೇತನಗಳ ವಸೂಲಾತಿಗಾಗಿ ನಾವು ಗುಲ್ಬರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಆ ರೀತಿಯಲ್ಲಿ ರಿಕವರಿ ಮಾಡಲಿಕ್ಕೆ ಅಧಿಕಾರವನ್ನು ಕೊಟ್ಟು ಆ ನಂತರ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕಾರ್ಖಾನೆಯ ಆಸ್ತಿಯನ್ನು ಮಾರಲಿಕ್ಕೆ ಹರಾಜು ಹಾಕಿ ಹಣವನ್ನು ಕಾರ್ಮಿಕರಿಗೆ ವೇತನವನ್ನು ಕೊಡುವುದಕ್ಕೋಸ್ಕರ ಹರಾಜನ್ನೂ ಸಹ ಗೊತ್ತುಮಾಡಿ ಅದು ಮೊದಲನೆ ಹರಾಜಿಗೆ ಬಿಡ್ಡುದಾರರು ಬರದೆ ಮುಂದೆ ಹೋಗಿ ಪುನಃ ಕಳೆದ 9 ನೇ ತಾರೀಖು ಈ ಹರಾಜು ಇತ್ತು. ಆ ಸಂದರ್ಭದಲ್ಲಿ ಈ ಮಧ್ಯೆ ಏನಾಗಿದೆ ಎಂದರೆ ಈ ಕಾರ್ಖಾನೆಯ ಮಾಲೀಕರುಗಳು ಬಿ.ಐ.ಎಫ್.ಆರ್.ಮುಂದೆ ಹೋಗಿ ಈ ಫ್ಯಾಕ್ಟರಿಯನ್ನು ರಿವೈವಲ್ ಮಾಡಲಿಕ್ಕೆ ಪ್ರಯತ್ನಪಟ್ಟ ಸಂದರ್ಭದಲ್ಲಿ ಬಿ.ಐ.ಎಫ್.ಆರ್.ನಲ್ಲಿ ಇವರ ಅರ್ಜಿ ತಿರಸ್ಕೃತಗೊಂಡಿದ್ದಕ್ಕಾಗಿ ಎ.ಐ.ಎಫ್.ಆರ್. ಮುಂದೆ ಇವರು ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈಗ ಎ.ಐ.ಎಫ್.ಆರ್. ಮುಂದೆ ದಾಖಲುಮಾಡಿ ಅವರು ನಮ್ಮ ಇಖಾಖೆಗೆ ಒಂದು ಸೂಚನೆಯನ್ನು ನೀಡಿ ಇದು ಎ.ಐ.ಎಫ್.ಆರ್. ಮುಂದೆ ಇರುವ ಕಾರಣ ಸಿಕ್ ಇಂಡಸ್ಟ್ರೀಸ್ ಆ್ಯಕ್ಟ್ ಸೆಕ್ಷನ್ 22ರಲ್ಲಿ ಯಾವುದೇ ಮಾರಾಟದ ವ್ಯವಹಾರವನ್ನು ಮುಂದುವರೆಸಲಿಕ್ಕೆ ಬರುವುದಿಲ್ಲ ಎನ್ನುವ ಒಂದು ಅಂಶವನ್ನು ತಿಳಿಸಿದಾಗ ನಾವೂ ಸಹ ಇಲಾಖೆಯವರು ಈ ಒಂದು ಕಾನೂನಿನ ತೊಡಕನ್ನು ಪರಿಶೀಲನೆಗೋಸ್ಕರ 9-11-98ರಲ್ಲಿ ಇದ್ದ ಹರಾಜನ್ನು ನಿಲ್ಲಿಸಿ ಪುನಃ ಕಾನೂನಿನ ಇಲಾಖೆಯಿಂದ ಎಲ್ಲಾ ಸಲಹೆಗಳನ್ನು ಪಡೆದು ಪುನಃ ಮತ್ತೊಂದು ದಿವಸವನ್ನು ನಿಗದಿ ಮಾಡುವುದಕ್ಕೆ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಈಗಾಗಲೇ ನಮ್ಮ ಇಲಾಖೆಯವತಿಯಿಂದ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಿಗೆ ಇಚ್ಛೆಪಡುವುದೇನೆಂದರೆ ಈಗ ಏನು ಒಂದು ಹರಾಜನ್ನು ನಿಲ್ಲಿಸಿದ್ದೇವೆ, ಈ ಹರಾಜನ್ನು ಕಾನೂನು ಬದ್ಧವಾಗಿ ಮುಂದೆ ಮಾಡಲಿಕ್ಕೆ ಅವಕಾಶ ಇದೆಯೇ ಎನ್ನುವ ಒಂದು ಕಾನೂನು ಸಲಹೆಯನ್ನು ಪಡೆದುಕೊಂಡು ಮುಂದಿನ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಖಂಡಿತಾ ಕಾಮಿರಕರ ವೇತನವನ್ನು ಪಾವತಿ ಮಾಡುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ತಮ್ಮೂಲಕ ಮಾನ್ಯ ಸದ್ಯಸರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ.ಗುರುನಾಥ್: ಅವರು ಹೇಳಿಕೆ ಕೊಟ್ಟಿದ್ದು ಇದರಲ್ಲಿ ತಪ್ಪು ಇದೆ. ಸ್ಪೆಸಿಫಿಕ್ ಆಗಿ ತಹಶೀಲ್ದಾರ್‌ರವರು ಏನು ನೋಟೀಫಿಕೇಷನ್ ಮಾಡಿದ್ದಾರೆ, ಆ ನೋಟೀಫಿಕೇಷನ್‌ನಲ್ಲಿ ಕ್ಲಿಯರ್ ಇದೆ. ಬರೀ ಕೆಲಸಗಾರರ ವೇತನಕ್ಕಾಗಿ ಎಂದು.

ಈಗ ಇವರು ಒಂದು ಕಾನೂನಿನ ಕ್ಲಾಸ್ ತೆಗೆದುಕೊಂಡು ಹೈಪವರ್ ಕಮಿಟಿಯಲ್ಲಿ ಅವರು ಯಾವುದಾದರೂ ಕಾನೂನಿನ ಒಂದು ಲಾಭ ಪಡೆಯುವುದಕ್ಕೋಸ್ಕರ ಇವರು ಮಾಡುತ್ತಿದ್ದಾರೆ. ದಯಮಾಡಿ ಇದನ್ನು ಈಗಾಗಲೇ ಮುಂದುವರಿಸಬೇಕು ಎಂದು ತಮ್ಮೂಲಕ ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಉಪಾಧ್ಯಕ್ಷರೇ, ಎರಡನೇ ಸಾರಿ ಹರಾಜನ್ನು ಮುಂದುವರಿಸಿದರಲ್ಲಾ, ಅವರು ಬಿ.ಐ.ಎಫ್.ಆರ್.ಗೆ ಅರ್ಜಿ ಹಾಕಿದರು, ತಿರಸ್ಕಾರವಾಯಿತು ಇನ್ನೊಂದು ಕಡೆ ಅರ್ಜಿ ಹಾಕಿದ್ದೀರಿ. ಆ ರೀತಿ ಅರ್ಜಿ ಹಾಕಿದ ಕೂಡಲೇ ಹರಾಜನ್ನು ಮುಂದುವರೆಸಬೇಕು ಎಂದು ನಿಮ್ಮ ನಿಯಮಾವಳಿಯಲ್ಲಿ, ಕಾನೂನಿನಲ್ಲಿ ಇದೆಯೇ? ಅದು ಇಲ್ಲದೇ ಹೋದರೆ ಏಕೆ ಅದನ್ನು ಮುಂದುವರಿಸಿದಿರಿ?

ಶ್ರೀ ಬಿ.ಸತ್ಯನಾರಾಯಣ್: ಸಿಕ್ ಇಂಡಸ್ಟ್ರೀಸ್ ಆ್ಯಕ್ಟ್ ಕೆಳಗೆ ಸೆಕ್ಷನ್ 22ರ ಕೆಳಗೆ ಅದನ್ನು ನಾನು ಓದಲಿಕ್ಕೆ ಇಚ್ಛೆಪಡುತ್ತೇನೆ. "Suspenison of legal proceedings, contracts, etc., therin in respect of any industrial company, an enquiry under Section 16 is pending or any scheme referred to under Section 17 is under preparation or consideration or a sanctioned scheme is under implementation or where an appeal under Section 25 relating to an industrial company is pending..." ಇಲ್ಲಿ ಅಪೀಲು ಪೆಂಡಿಂಗ್ ಇದೆ. ",,, then notwithstanding anything contained in the Companies Act, 1956 or any other law, the memorandum and articles of association of the industrial company or any other istrument having effect under the said Act or other law, no proceedings for the winding up of the industrial company or for execution, distress or the like against the properties of the industrial company or for the appointment of a receiver." ಈ ರೀತಿ ಇದೆ. ಈ ಕಾರಣಕ್ಕೆ ಈ ಒಂದು ಸೂಚನೆಯನ್ನು ಆಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಅಜಿತ್‌ಪಾಂಜಾ ಅವರು ಅಲ್ಲಿನ ಲೀಗಲ್ ಅಡ್ವೈಸರ್. ಅವರು ನಮ್ಮ ಇಲಾಖೆಯ ಅಧಿಕಾರಿಗಳಿಗೆ ಮತ್ತೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ನಾವು ರಿಜಿಸ್ಟರ್ ಮಾಡಿದ್ದೇವೆ ಎನ್ನುವ ಒಂದು ಪತ್ರವನ್ನೂ ಸಹಾ ಅವರು ಬರೆದಿದ್ದಾರೆ. ಆ ಪತ್ರದ ಆಧಾರದಮೇಲೆ ನಮ್ಮ ಹೈಪವರ್ ಕಮಿಟಿ ಈ ತೀರ್ಮಾನವನ್ನು ತೆಗೆದುಕೊಂಡಿದೆ.

ಶ್ರೀ ಸಿ.ಗುರುನಾಥ್: ಇವರು ಬಿ.ಐ.ಎಫ್.ಆರ್.ಗೆ ಹೋಗಿದ್ದು ನಿಜ. ಅಲ್ಲಿ ಇವರ ಕೇಸ್ ರಿಜೆಕ್ಟ್ ಆಗಿದೆ. ರಿಜೆಕ್ಟ್ ಆದ ನಂತರ ಅಲ್ಲಿ ಇನ್ನೊಂದು ಕೋರ್ಟಿದೆ. ಎ.ಐ.ಎಫ್.ಆರ್. ಏನೋ ಮೇಲಿನ ಒಂದು ಟ್ರಿಬ್ಯೂನಲ್ ಇದೆ. ಅವರು ಹೋಗಿದ್ದಾರೆ. ಆದರೆ ಈ ಟ್ರಿಬ್ಯೂನಲ್‌ಗೆ ಹೋದನಂತರ ಈ ಹರಾಜು ಬಂದ್ ಆಗಬೇಕು ಎಂದು ಯಾವುದೇ ಕಾನೂನು ಇದರಲ್ಲಿ ಇಲ್ಲ. ಅವರು ದಯಮಾಡಿ ಹೇಳಬೇಕು.

ಶ್ರೀ ಬಿ.ಸತ್ಯನಾರಾಯಣ: ಅಧ್ಯಕ್ಷರೇ, Appeal under Section 25 of the Sick Industries Act ಕೆಳಗಡೆ....

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಗುರುನಾಥ್‌ರವರು ಹೇಳಿದ ಪ್ರಶ್ನೆ ಬಗ್ಗೆ ಕಾನೂನಿನ ಇಲಾಖೆಯ ಜೊತೆ ಚರ್ಚೆಮಾಡಿ ಏನು ಅಗತ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೂಡಲೇ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು: ಈಗ ಸದನವನ್ನು ಅರ್ಧ ಗಂಟೆ ಮುಂದೂಡಿ ಮತ್ತೆ 3 ಗಂಟೆಗೆ ಸೇರೋಣ.

(ಸದನವು 2-38ಕ್ಕೆ ಮುಂದೂಡಲ್ಪಟ್ಟು ಮತ್ತೆ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3.20ಕ್ಕೆ ಸಮಾವೇಶಗೊಂಡಿತು)

(ಉಪಸಭಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ಎ.ರಾಮದಾಸ್ ಉಪಾಧ್ಯಕ್ಷರೆ, ಇದು ಬಹಳ ಪ್ರಮುಖವಾದ ವಿಚಾರ. ಆದರೂ ಕೂಡ ಇದು ಶೂನ್ಯ ವೇಳೆಯಲ್ಲಿ ಬಂದಿದೆ ಅನ್ನುವಂತಹ ವಿಚಾರವನ್ನು ಇಟ್ಟುಕೊಂಡು ಕೇವಲ ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು: ನಿಮ್ಮ ನೋಟಿಸ್ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅವರು ಉತ್ತರ ಕೊಡುತ್ತಾರೆ.

**(ಇ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ನಿವೇಶನ.**

ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ನಿವೇಶನಗಳಿಗೆ ಅರ್ಜಿಯನ್ನು ಕರೆದಿದ್ದಾರೆ, ಅದರಲ್ಲಿ 286 ಅರ್ಜಿಗಳು ಬಂದಿದ್ದವು. 250 ಅರ್ಜಿಗಳನ್ನು ತಿರಸ್ಕೃತ